# ಸ್ನಾತಕೋಪದೇಶ

ನಮ್ಮ ಶಿಕ್ಷಣ ವ್ಯವಸ್ಥೆಯಲ್ಲಿ ಸ್ನಾತಕ (ಪದವಿ), ಸ್ನಾತಕೋತ್ತರ (ಉನ್ನತ ಪದವಿ) ಎಂಬ ಮಾತುಗಳು ಬಳಕೆಯಲ್ಲಿವೆ. ವಿದ್ಯಾರ್ಥಿಯು ಒಂದು ಜ್ಞಾನಶಾಖೆಯನ್ನು ಗುರುವಿನಿಂದ ಪಡೆದು ಧನ್ಯನಾಗುವ ಕ್ಷಣಗಳವು. ಪ್ರಾಚೀನಕಾಲದಲ್ಲಿ 'ಬ್ರಹ್ಮಚಾರಿ'ಯಾದವನು ಸಮಾವರ್ತನ ಮುಗಿಸಿಕೊಂಡು ಗೃಹಸ್ಥಾಶ್ರಮಕ್ಕೆ ಅರ್ಹತೆ ಪಡೆಯುವ ಮುಹೂರ್ತವನ್ನು ಇದು ಸೂಚಿಸುತ್ತಿತ್ತು. ನಮ್ಮ ಕಾಲದಲ್ಲೂ ಪದವಿಯನ್ನೋ ಸ್ನಾತಕೋತ್ತರ ಪದವಿಯನ್ನೋ ಮುಗಿಸಿಕೊಂಡು ಗೃಹಸ್ಥಾಶ್ರಮಕ್ಕೆ ಮರಳುವುದುಂಟಷ್ಟೆ. ಹಿಂದಿನ ಕಾಲದಲ್ಲಿ ತಾರುಣ್ಯ ಬರುವ ಮೊದಲೆ 'ಸ್ನಾತಕ'ದ ನೆಲೆ ಮುಗಿಯುತ್ತಿತ್ತು. ಬ್ರಹ್ಮಚರ್ಯದ ಕಡೆಯಲ್ಲಿ ಕೇಶಾಂತ ಎಂಬ ಸಂಸ್ಕಾರವೊಂದು ಇರುತ್ತಿತ್ತು. ವ್ರತನಿಷ್ಠನಾಗಿ ವಿದ್ಯೆ ಕಲಿತ ವಿದ್ಯಾರ್ಥಿಯು ಅಂದ–ಚಂದದ ಕಡೆ ಗಮನವನ್ನು ಹರಿಸುತ್ತಿರಲಿಲ್ಲ. ಇಲ್ಲಿ ಬರುವ ಸಂಸ್ಕಾರದ ಉದ್ದೇಶವೇ ಅವನು ವೈವಾಹಿಕ ಜೀವನಕ್ಕೆ ಬೇಕಾದ ಸೊಗಸನ್ನು ಮೈಗೂಡಿಸಿಕೊಳ್ಳುವುದಿತ್ತು. ಬ್ರಹ್ಮಚರ್ಯದ ಕಡೆಯ ಭಾಗದಲ್ಲಿ ಅಂದ–ಚಂದವೂ ಸಂಸ್ಕಾರದ ಭಾಗವೇ ಆಗಿತ್ತು. ಇದು ನಮ್ಮ ಪ್ರಾಚೀನ ಋಷಿಗಳು ಕಂಡುಂಡ ಜೀವನದರ್ಶನ. ಬ್ರಹ್ಮಚಾರಿಯು ಗುರುವಿಗೆ ಗುರುದಕ್ಷಿಣೆಯನ್ನು ನೀಡಿ ಕೇಶಸಂಸ್ಕಾರ ಮಾಡಿಕೊಳ್ಳಬೇಕಿತ್ತು.

ಕಾಳಿದಾಸನು ತನ್ನ 'ರಘುವಂಶ' ಮಹಾಕಾವ್ಯದಲ್ಲಿ 'ಗುರುದಕ್ಷಿಣೆ'ಯ ವಿಷಯವನ್ನು ಪ್ರಸ್ತಾಪಿಸುತ್ತಾನೆ. ವರತಂತು ಒಬ್ಬ ಋಷಿ. ಅವನ ಆಶ್ರಮದಲ್ಲಿ ಕೌತ್ಸ ಎಂಬ ಬ್ರಹ್ಮಚಾರಿಯು ಅಧ್ಯಯನ ಮಾಡುತ್ತಿರುತ್ತಾನೆ. ನಿಗದಿತ ವರ್ಷದಲ್ಲಿ ಕೌತ್ಸನ ಅಧ್ಯಯನ ಮುಗಿಯುತ್ತದೆ. ಆಗ ಗುರುವಿನ ಬಳಿ ಬಂದು ಗುರುದಕ್ಷಿಣೆಯನ್ನು ಪ್ರಸ್ತಾಪಿಸುತ್ತಾನೆ. ಆಗ ವರತಂತು ಋಷಿಯು 'ನೀನು ಎಷ್ಟೋ ಕಾಲ ನನ್ನನ್ನು ಶುಶ್ರೂಷೆ ಮಾಡಿದ್ದೀಯೆ. ಗುರುದಕ್ಷಿಣೆ ಬಂದಂತಾಗಿದೆ' ಎನ್ನುತ್ತಾನೆ. ಕೌತ್ಸ ಬಿಡದೆ ಪೀಡಿಸಿದಾಗ, ಹದಿನಾಲ್ಕು ಕೋಟಿ ಹೊನ್ನನ್ನು ಗುರುದಕ್ಷಿಣೆಯಾಗಿ ಕೊಡೆಂದು ವರತಂತು ಋಷಿ ಸೂಚಿಸುತ್ತಾನೆ. ಈ ಬಡ ಕೌತ್ಸ ಅಷ್ಟು ಹೊನ್ನನ್ನು ಎಲ್ಲಿಂದ ತರಬಲ್ಲ? ಆಗ ಅವನು ರಘು ಮಹಾರಾಜನ ಬಳಿ ಬರುತ್ತಾನೆ. ಅದೇ ತಾನೆ ವಿಶ್ವಜಿದ್‌ಯಾಗ ಮಾಡಿ ತನ್ನಲ್ಲಿದ್ದ ಸಮಸ್ತ ಧನ–ಧಾನ್ಯ–ವಸ್ತು ಪರಿಕರಗಳನ್ನು ದಾನಮಾಡಿ ಬರಿಗೈಯಲ್ಲಿದ್ದಾನೆ. ಅಂಥ ಮಹಾರಾಜನ ಬಳಿ ಬಂದು, ಹದಿನಾಲ್ಕು ಕೋಟಿಗೆ ಬೇಡಿಕೆ ಇಡುತ್ತಾನೆ. ಕೌತ್ಸನಿಗೆ ರಘು ಮಹಾರಾಜನ ಪರಿಸ್ಥಿತಿ ತಿಳಿದಿರುತ್ತದೆ. ರಘು ಮಹಾರಾಜನು ಕೌತ್ಸನ ವಿಷಯವನ್ನೆಲ್ಲಾ ತಿಳಿದು ಇನ್ನೆರಡು ದಿನ ನಮ್ಮ ಯಾಗಶಾಲೆಯಲ್ಲಿ ಇರಬೇಕೆಂದೂ ಅಷ್ಟು ಹೊನ್ನನ್ನು ದಾನ ನೀಡಿ ಕಳಿಸುವೆನೆಂದೂ ಹೇಳುತ್ತಾನೆ. ಮರುದಿನ ಪ್ರಾತರ್ವಿಧಿಗಳನ್ನು ಮುಗಿಸಿಕೊಂಡು ಕುಬೇರನ ಬಳಿ ಹೊರಡಲು ರಘು ಉದ್ಯುಕ್ತನಾಗುತ್ತಾನೆ. ಆಗ ಭಂಡಾರದ ಆಳು ಬಂದು 'ನೆನ್ನೆ ರಾತ್ರಿ ಸುವರ್ಣವರ್ಷವಾಗಿ ಭಂಡಾರ ಭರ್ತಿಯಾಗಿದೆ'ಯೆಂದು ತಿಳಿಸುತ್ತಾನೆ. ರಘು ಮಹಾರಾಜನಿಗೆ ಸಮಾಧಾನ ಆಗುತ್ತದೆ. ಕೌತ್ಸಮುನಿಯನ್ನು ಕರೆದು ಹದಿನಾಲ್ಕು ಕೋಟಿ ಸುವರ್ಣನಾಣ್ಯಗಳನ್ನು ಕೊಡುತ್ತಾನೆ. ಆ ಹಣವನ್ನು ನೂರಾರು ಒಂಟೆಗಳು ಮತ್ತು ಹೆಣ್ಣು ಕುದುರೆಗಳು ಹೊತ್ತು ಸಾಗುತ್ತವೆ. ಕೌತ್ಸನು ರಘುವಿಗೆ ಅಭಿನಂದಿಸಿ ಹೊರಡುತ್ತಾನೆ.

ಬ್ರಹ್ಮಚಾರಿಗಳು ಗುರುದಕ್ಷಿಣೆಯನ್ನು ಹೇಗಾದರೂ ನೀಡಬಹುದಿತ್ತು. ಕೇಶಾಂತ ಕಳೆದು 'ಸಮಾವರ್ತನ' ಮಾಡುವುದು ಸಂಸ್ಕಾರದ ಒಂದು ಅಂಶವೇ. ಈ ಶಬ್ದಕ್ಕೆ ಮನೆಗೆ ಮರಳುವುದೆಂದೇ ಅರ್ಥ. ಬ್ರಹ್ಮಚಾರಿಯು ಬ್ರಹ್ಮಚರ್ಯಾಶ್ರಮ ಮತ್ತು ವಿದ್ಯಾಭ್ಯಾಸಗಳೆಂಬ ಮಹಾಯಜ್ಞ ಮುಕ್ತಾಯಗೊಳ್ಳುತ್ತದೆಂಬ ಸೂಚನೆ ಇಲ್ಲುಂಟು. ಇದು ಸ್ನಾತಕ ಆಗುವ ಘಟ್ಟ. ಇದೀಗ ಗೃಹಸ್ಥಾಶ್ರಮಕ್ಕೆ ಪ್ರವೇಶ ಪಡೆಯಲು ಅರ್ಹನೆಂಬ ಸೂಚನೆ ಇಲ್ಲಿದೆ. ಗುರುಕುಲದಿಂದ ವಿದ್ಯಾಸಂಪನ್ನನಾಗಿ ಹೊರಬರುವ ತರುಣನಿಗೆ ಸಮಾಜ ತೋರುವ ಆದರ, ಆತನ ಬಾಧ್ಯತೆಯನ್ನೂ ವಿದ್ಯೆಯ ಮಹತ್ವವನ್ನೂ ಧ್ವನಿಸುತ್ತದೆ. ಇಂದಿನ ವಿಶ್ವವಿದ್ಯಾಲಯದ ಘಟಿಕೋತ್ಸವವೇ ಅಂದಿನ 'ಸಮಾವರ್ತನೆ'. ಇಂಗ್ಲಿಷಿನ ಕಾನ್ವೋಕೇಷನ್ ಎಂಬುದು 'ಘಟಿಕೋತ್ಸವ' ಆಗಿದ್ದರೂ ಪುರಾತನ ಋಷಿಗಳ ಕಾಲದಲ್ಲೂ ಘಟಿಕೋತ್ಸವ ಇರುತ್ತಿತ್ತು. ಆ ಸಂದರ್ಭದಲ್ಲಿ ಗುರುವು ಶಿಷ್ಯನಿಗೆ ಸ್ನಾತಕೋಪದೇಶ ಮಾಡುತ್ತಿದ್ದ ಸುಂದರ ದೃಶ್ಯ ಉಪನಿಷತ್ತಿನಲ್ಲಿ ಕಂಡುಬರುತ್ತದೆ. ಪ್ರಖ್ಯಾತವಾದ ಹತ್ತು ಉಪನಿಷತ್ತುಗಳಲ್ಲಿ ತೈತ್ತಿರೀಯೋಪನಿಷತ್ತು ಒಂದು. ಈ ಉಪನಿಷತ್ತಿನ 'ಶಿಕ್ಷಾವಲ್ಲಿ'ಯಲ್ಲಿ ಬರುವ ಮಾತುಗಳು ವೈಶ್ವಿಕ ಅರ್ಥವನ್ನು ಧ್ವನಿಸುತ್ತವೆ. ಇದು ಗುರುವು ಶಿಷ್ಯನಿಗೆ ಮಾಡುವ ಸ್ನಾತಕೋಪದೇಶ. 'ಸತ್ಯಂ ವದ ಧರ್ಮಂ ಚರ, ಸ್ವಾಧ್ಯಾಯಾನ್ಮಾ ಪ್ರಮದಃ, ಆಚಾರ್ಯಾಯ ಪ್ರಿಯ ಧನಮಾಹೃತ್ಯ, ಪ್ರಜಾತಂತುಂ ಮಾ ವ್ಯವಚ್ಛೇತ್ಸೀಃ, ಸತ್ಯಾನ್ನ ಪ್ರಮದಿತವ್ಯಂ, ಧರ್ಮಾನ್ನ ಪ್ರಮದಿತವ್ಯಂ, ಕುಶಲಾನ್ನ ಪ್ರಮದಿತವ್ಯಂ, ಭೂತ್ಯೈ ನ ಪ್ರಮದಿತವ್ಯಂ, ಸ್ವಾಧ್ಯಾಯ ಪ್ರವಚನಾಭ್ಯಾಂ ನ ಪ್ರಮದಿತವ್ಯಂ, ದೇವಪಿತೃ ಕಾರ್ಯಾಭ್ಯಾಂ ನ ಪ್ರಮದಿತವ್ಯಂ, ಮಾತೃದೇವೋ ಭವ, ಪಿತೃದೇವೋ ಭವ, ಆಚಾರ್ಯ ದೇವೋ ಭವ, ಅತಿಥಿದೇವೋ ಭವ...' ಯಾವ ಕರ್ಮಗಳು ನಿಂದನೀಯವೋ ಅದನ್ನು ಮಾಡಬೇಡ. ನಮ್ಮಲ್ಲಿರುವ ಯಾವ ಒಳ್ಳೆಯ ನಡತೆಗಳಿವೆಯೋ ಅವುಗಳನ್ನೇ ಅಭ್ಯಾಸ ಮಾಡಬೇಕು. ಉಳಿದವುಗಳನ್ನು ಮಾಡಬಾರದು. ನಮಗಿಂತ ಉತ್ತಮರಾದ ಯಾವ ಯಾವ ಬ್ರಾಹ್ಮಣರು ಇರುವರೋ ಅವರನ್ನು ಆಸನಕೊಟ್ಟು ಆದರಿಸಬೇಕು. ಈ ಎಲ್ಲಾ ವಿವರಗಳು ಶಿಕ್ಷಾವಲ್ಲಿ ಹನ್ನೊಂದನೆಯ ಅನುವಾಕದಲ್ಲಿ ಬರುತ್ತವೆ.

ಮೇಲಿನ ಮಾತುಗಳು ಯಾವ ಕಾಲಕ್ಕೂ ಅನ್ವಯವಾಗುತ್ತವೆ. ಆ ಮಾತುಗಳ ಒಟ್ಟು ಅರ್ಥ ಇಷ್ಟು: 'ಸತ್ಯವನ್ನು ಹೇಳು. ಧರ್ಮವನ್ನು ಆಚರಿಸು. ಅಧ್ಯಯನದಲ್ಲಿ ಪ್ರಮಾದ ಮಾಡಬೇಡ. ಆಚಾರ್ಯನಿಗೆ ಇಷ್ಟವಾದ ಧನವನ್ನು ತಂದುಕೊಡು. ಸಂತತಿಯನ್ನು ಯಾವತ್ತೂ ವಿಚ್ಛಿತ್ತಿಗೊಳಿಸದಿರು. ಸತ್ಯದಿಂದ ಕದಲಬೇಡ. ಧರ್ಮವನ್ನು ಬಿಡಬೇಡ. ಕುಶಲದಿಂದ ಜಾರಿ ಹೋರಾಗಬೇಡ. ಮಂಗಳೋಕ್ತ ಕರ್ಮದಿಂದ ಕದಲಬೇಡ. ಸ್ವಾಧ್ಯಾಯ ಪ್ರವಚನಗಳಿಂದ ಬೇರಾಗಬೇಡ. ತಾಯಿಯೇ ನಿನಗೆ ದೇವರು. ತಂದೆಯೇ ನಿನಗೆ ದೇವರು. ಅತಿಥಿಯೇ ನಿನಗೆ ದೇವರು' – ಗುರುಕುಲದ ವಿದ್ಯಾಭ್ಯಾಸವನ್ನು ಪೂರೈಸಿಕೊಂಡು ಮನೆಗೆ ಹೋಗುತ್ತಿರುವ ವಿದ್ಯಾರ್ಥಿಗೆ ಇದಕ್ಕಿಂತ ಬೇರಾವ ಸ್ನಾತಕೋಪದೇಶ ಬೇಕು? ವಿದ್ಯೆಯನ್ನು ಮುಗಿಸಿಹೋಗುವ ವಿದ್ಯಾರ್ಥಿ ನಾಳೆ ದೇಶದ ಜವಾಬ್ದಾರಿಯೊಂದನ್ನು ನಿರ್ವಹಿಸಬೇಕಾಗುತ್ತದೆಯಷ್ಟೆ. ಅವನು ಉತ್ತಮ ಗೃಹಸ್ಥನಾದರೆ ದೇಶಕ್ಕೆ ಒಳ್ಳೆಯದು. ವ್ಯಕ್ತಿ, ವ್ಯಕ್ತಿತ್ವ, ಕುಟುಂಬ, ಸಮುದಾಯ, ದೇಶ ಇವೆಲ್ಲಕ್ಕೂ ಮೂಲವಾದುದು ಗೃಹಸ್ಥಧರ್ಮ. ಇಂಥವೆಲ್ಲಾ ಆಶಯಗಳು ಗುರು ನೀಡುವ ಸ್ನಾತಕೋಪದೇಶದಲ್ಲಿ ಬಿಂದುವಿನಂತೆ ಅಡಕವಾಗಿವೆ.

■ **ಪುರಂಜೀವಿ**

## ಮಾತೇ ಮುತ್ತು

- ನಡತೆ ಎನ್ನುವುದು ಒಂದು ಕನ್ನಡಿ. ಅದರಲ್ಲಿ ಪ್ರತಿಯೊಬ್ಬರೂ ತಮ್ಮ ಪ್ರತಿಬಿಂಬವನ್ನು ಪ್ರತಿಫಲನಗೊಳಿಸುತ್ತಾರೆ.

  –ಸಾಕ್ರೆಟೀಸ್

- ಹೆಣ್ಣಿಗೆ ನಿದ್ರೆ ಹೆಚ್ಚು ಬೇಕು ನಿಜ, ಅಂದರೆ ಹೆಚ್ಚು ಮಲಗುವುದು ಗಂಡು.

  –ಬೀಚಿ

- ಭಯ ಎಂಬ ದೊಡ್ಡ ಭೂತ ಯಾರ ಹತ್ತಿರ ಸುಳಿಯುವುದಿಲ್ಲವೋ ಅಂತಹವರ ಹತ್ತಿರ ಸೋಲು, ಸರ್ವನಾಶಗಳ ಸುಳಿವೂ ಇಲ್ಲ.

  –ಮಹಾತ್ಮ ಗಾಂಧಿ

- ಮನುಷ್ಯನ ನಿಜವಾದ ಆಸ್ತಿ ನೆನಪು.

  –ಅಲೆಕ್ಸಾಂಡರ್ ಸ್ಮಿತ್

- ಮಾತನಾಡುವ ಸಂದರ್ಭ ಬಂದಾಗ ಮಾತ್ರ ನಿನ್ನ ಅಭಿಪ್ರಾಯ ತಿಳಿಸು.

  –ಫ್ರಾಂಕ್ಲಿನ್

- ಪ್ರಯತ್ನವೇ ಅದೃಷ್ಟವನ್ನು ಸಮೀಪಿಸುವ ಕುಶಲತೆ.

  –ಮಹಾತ್ಮ ಗಾಂಧಿ

- ಮನುಷ್ಯತ್ವದ ಹೆಸರೇ ಪ್ರೇಮ.

  –ಬುದ್ಧ